ಶ್ರೀ ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಚಿಂಚೋಳಿಗೆ ಬದಲಾಗಿ ಚಿಕ್ಕೋಡಿ ಎಂದು ಇದೆ. ಚಿಂಚೋಳಿಯಲ್ಲಿ ೯೭ ತಾಂಡಾಗಳ ಪೈಕಿ ಕೇವಲ ೫ ತಾಂಡಾಗಳಿಗೆ ಇದುವರೆಗೆ ವಿದ್ಯುದ್ದೀಕರಣ ಮಾಡಲಾಗಿದೆ. ಹೋದವರ್ಷ ಇದೇ ಪ್ರಶ್ನೆಯನ್ನು ಕೇಳಿದಾಗ ಕೇಂದ್ರ ಸರ್ಕಾರದಿಂದ ತಾಂಡಾಗಳ ಪೈಕಿ ಕ್ಲಾರಿಫಿಕೇಷನ್ ಕೇಳಿದ್ದಾರೆ. ಒಂದು ವೇಳೆ ಅಲ್ಲಿಂದ ಉತ್ತರ ಮತ್ತು ಕ್ಲಿಯರೆನ್ಸ್ ಸಿಕ್ಕಿದರೆ ಆಗ ವಿದ್ಯುದ್ದೀಕರಣ ಮಾಡಲಾಗುತ್ತದೆ ಎಂದು ಹೇಳಿದರು. ಈಗಿನ ಉತ್ತರದಲ್ಲಿ ಆ ವಿಷಯವಾಗಿ ಏನೂ ಹೇಳಿಲ್ಲ. ವಿದ್ಯುದ್ದೀಕರಣ ಮಾಡುವ ಬಗ್ಗೆ ಸಮಯವನ್ನು ನಿರ್ದಿಷ್ಟಪಡಿಸಿಲ್ಲ. ಆದ್ದರಿಂದ ಯಾವಾಗ ಈ ಕಾರ್ಯ ಕೈಗೊಳ್ಳುತ್ತೀರಿ ಎಂಬುದನ್ನು ಮಂತ್ರಿಗಳು ಹೇಳಬೇಕು ?

ಶ್ರೀ ಜೆ. ಎಸ್. ದೇಶಮುಖ್.—ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ೫೮೬ ತಾಂಡಾಗಳಿದ್ದು ೩೧-೧೧-೧೯೮೬ರ ವೇಳೆಗೆ ೭೪ ತಾಂಡಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ. ೧೯೮೪-೮೫ನೇ ಸಾಲಿನಲ್ಲಿ ೪ ತಾಂಡಗಳಿಗೂ ೧೯೮೫-೮೬ನೇ ಸಾಲಿನಲ್ಲಿ ೧-೪-೧೯೮೫ ರಿಂದ ೩೧-೧೧-೧೯೮೬ರ ವರೆಗೆ ೮ ತಾಂಡಗಳಿಗೂ ವಿದ್ಯುತ್ ಒದಗಿಸಲಾಯಿತು, ೩೧-೩-೧೯೮೬ರ ವೇಳೆಗೆ ಇನ್ನೂ ೩ ತಾಂಡಗಳಿಗೆ ವಿದ್ಯುತ್ ಒದಗಿಸಲಾಗುವುದು.

ಗುಲ್ಬರ್ಗ ಜಿಲ್ಲೆಯಲ್ಲಿ ೧೮ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಗಳು ಕಾರ್ಯಗತವಾಗುತ್ತಿದೆ. ಈ ಯೋಜನೆಯಲ್ಲಿ ೧೫೦ ಗ್ರಾಮಗಳಿಗೆ ಸೇರಿದಂತೆ ಸುಮಾರು ತಾಂಡಾಗಳು ಇವುಗಳಲ್ಲಿ ಸೇರಿದ್ದು ಇದನ್ನು ೭ನೇ ಪಂಚವಾರ್ಷಿ ಯೋಜನೆಯಲ್ಲಿ ವಿದ್ಯುದ್ದೀಕರಣಗೊಳಿಸಲಾಗುವುದು.

ಗುಲ್ಬರ್ಗ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗಿರುವ ಗ್ರಾಮಗಳಿಗೆ ಹೆಚ್ಚುವರಿ ವಿದ್ಯುತ್ ಪೂರೈಕೆಗೆ ಬಿಟ್ಟು ಹೋಗಿರುವ ಉಪಗ್ರಾಮ, ತಾಂಡ, ಗಿರಿಜನ ಕಾಲೋನಿ ಜನತಾ ಕಾಲೋನಿಗಳ ವಿದ್ಯುದ್ದೀಕರಣ ಕ್ಕಾಗಿ ತೀವ್ರ ವಿದ್ಯುದ್ದೀಕರಣ ಯೋಜನೆ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಯಡಿಯಲ್ಲಿ ತಯಾರಿಸಿ ೧೯೮೬-೮೭ನೇ ಸಾಲಿನಲ್ಲಿ ಮಂಜೂರಾತಿ ಪಡೆಯಲಾಗುವುದು.

ಪ್ರಶ್ನೆ ಸಂಖ್ಯೆ; ೬೪೮ (೧೪೦೪)

ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಸಂಖ್ಯೆ : ೬೫೦ (೧೬೮೩)

ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಸಂಖ್ಯೆ ; ೬೪೯ (೫೭೮)

ಸದಸ್ಯರು ಹಾಜರಿರಲಿಲ್ಲ,

ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಮೀನು ಮಂಜೂರಾಗಿದ್ದು ಕಂದಾಯ ವಸೂಲಿ ಮಾಡದಿರುವ ಬಗ್ಗೆ

೧೪೮೫. ಶ್ರೀ ಬಿ. ಬಿ. ನಿಂಗಯ್ಯ (ಮೂಡಿಗೆರೆ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೭೯-೮೦ ರಿಂದ ೧೯೮೪-೮೫ರ ವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಮೀನು ಮಂಜೂರಾಗಿದ್ದು ಕಂದಾಯ ವಸೂಲಿ ಮಾಡದೆ ತಗಾದೆ ರಶೀದು ಕೊಡದೆ ಇರುವ ಪ್ರಕರಣಗಳ ಸಂಖ್ಯೆ ಹಾಗೂ ವಿಸ್ತೀರ್ಣವೆಷ್ಟು ?

ಆ) ೧೯೭೯-೮೦ ರಿಂದ ೧೯೮೪-೮೫ರ ವರೆಗೆ ಇದರಿಂದ ಆಗಿರುವ ಸೊರಿಕೆಯ ವಿವರದ ಒಟ್ಟು ಮೊಬಲಗೆಷ್ಟು ?

ಇ) ಮಂಜೂರಾದ ವಿಸ್ತೀರ್ಣಕ್ಕೆ ಕಂದಾಯ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿ ಆಗಿರುವ ಪ್ರಕರಣಗಳ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಳ್ಳುವರು?

ಶ್ರೀ ಎಸ್ ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ೧೯೭೯-೮೦ ರಿಂದ ೧೯೮೪-೮೫ರ ವರೆವಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ೭೮೭೮ ಜನರಿಗೆ ೨೪೧೦೮-೨೯ ಎಕರೆಯಷ್ಟು ಜಮೀನನ್ನು ಭೂ ಮಂಜೂರಾತಿ ನಿಯಮಗಳಂತೆ ಮಂಜೂರಿ ಮಾಡಲಾಗಿದ್ದು ಮಂಜೂರಾದ ಜಮೀನಿಗೆ ಕಂದಾಯವನ್ನು ಭೂ ಮಂಜೂರಾತಿ ನಿಯಮಗಳಂತೆ ವಿಧಿಸಿ, ಡಿಮಾಂಡಿಗೆ ತೆಗೆದುಕೊಂಡು ವಸೂಲಿ ಮಾಡಲಾಗಿದೆ. ಆದ್ದರಿಂದ ಕಂದಾಯದ ವಸೂಲಿಗೆ ತಗಾದೆ ಇರಿಸಿದೆ ಕೊಡದೆ ಇರುವ ಪ್ರಕರಣಗಳು ಯಾವುದು ಇರುವುದಿಲ್ಲಾ.

ಆ) ಮೇಲಿನ ಆ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ) ಭೂ ಮಂಜೂರಾತಿ ನಿಯಮಗಳಂತೆ ಮಂಜೂರಾದ ಜಮೀನಿಗೆ ಕಂದಾಯ ವಿಧಿಸುವುದು ಕಡ್ಡಾಯವಾದುದರಿಂದ ಕಂದಾಯ ವಿಧಿಸದೆ ಇರುವ ಪ್ರಕರಣಗಳು ಯಾವುವೂ ಇರುವುದಿಲ್ಲ.

ಈ) ಮೇಲಿನ ಉತ್ತರಗಳಿಂದ ಕಂದಾಯ ವಿಧಿಸದೆ ಇರುವ ಪ್ರಕರಗಳು ಬಾಕಿ ಇರುವುದಿಲ್ಲಾ ಒಂದು ವೇಳೆ ಇದ್ದರೆ ಇಂತಹ ಪ್ರಕರಣಗಳನ್ನು ತಪಾಸಣೆ ನಡೆಸಲು ವಿಭಾಗಾಧಿಕಾರಿಗಳವರ ಉಸ್ತುವಾರಿಕೆಯಲ್ಲಿ ರೆವಿನ್ಯೂ ಆಡಿಟ್‌ರವರ ಒಂದು ವಿಭಾಗವಿದ್ದು ಇದಂ ಪ್ರತಿ ಜಿಲ್ಲೆಯಲ್ಲಿಯ ಕಂದಾಯ ಲೆಕ್ಕಗಳನ್ನು ತಪಾಸಿಸಿ ಕಂದಾಯ ವಿಧಿಸದೆ ಇರುವ ಪ್ರಕರಣಗಳನ್ನು ಪತ್ತೆ ಹಚ್ಚಿ ಕೂಡಲೇ ಕಂದಾಯ ವಿಧಿಸಲು ಸಂಬಂಧಪಟ್ಟವರಿಗೆ ಸೂಚಿಸುತ್ತದೆ.

ಅಧ್ಯಕ್ಷರು.— ವಿನಯಕುಮಾರ್ ಸೊರಕೆಯವರೇ, ಮಾನ್ಯ ಕುಶಾಲ್ ಅವರ ಪ್ರಶ್ನೆ ಕೇಳುತ್ತೀರಾ?

ಶ್ರೀ ವಿನಯಕುಮಾರ್ ಸೊರಕೆ.— ಮಾನ್ಯ ಕುಶಾಲ್‌ರವರ ಪರವಾಗಿ ಪ್ರಶ್ನೆ ೬೫೦ನ್ನು ಕೇಳುತ್ತೇನೆ.

ಅಧ್ಯಕ್ಷರು —ಕೇಳಿ

ಕಂದಾಯ ಇಲಾಖೆಯಲ್ಲಿರುವ ಗ್ರಾಮ ಲೆಕ್ಕಿಗರು

೧೬೫೩. ಶ್ರೀ ಕೆ. ಕುಶಾಲ (ಸುಳ್ಯ) ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಕಂದಾಯ ಇಲಾಖೆಯಲ್ಲಿರುವ ಗ್ರಾಮಲೆಕ್ಕಿಗರ ಸಂಖ್ಯೆ ಎಷ್ಟು?

ಆ) ಇವರಿಗೆ ಶೇಕಡ ೪೦ರಷ್ಟು ಬಡ್ತಿ ಕೊಡಲು ಸರ್ಕಾರಿ ಆಜ್ಞೆಯಾಗಿದೆಯೇ, ಈ ಆದೇಶದಂತೆ ೧೯೮೨ ರಿಂದ ಈ ತನಕ ಬಡ್ತಿ ನೀಡಿದವರ ಸಂಖ್ಯೆ ಎಷ್ಟು? ಹಾಗೂ ಇದರಲ್ಲಿ ಹಿಂಬಡ್ತಿ ಆದವರ ಸಂಖ್ಯೆ ಎಷ್ಟು ಮತ್ತು ಹಿಂಬಡ್ತಿ ನೀಡಿದ ನಂತರ ಪುನರ್‌ಪರಿಶೀಲನೆಯಂತೆ ಬಡ್ತಿ ನೀಡಲಾಗಿದೆಯೇ?

ಇ) ಜೇಷ್ಠತಾ ಪಟ್ಟಿಯಂತೆ ಬಡ್ತಿ ನೀಡಲಾಗಿದೆಯೇ ?

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಮೇಲಿನಂತೆ ಬಡ್ತಿ, ಹಿಂಬಡ್ತಿ, ನೀಡಿದ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಪುನರ್‌ಪರಿಶೀಲನೆ ನೀಡಿ ಬಡ್ತಿ, ನೀಡಿದ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ರಾಜಸ್ವ ಇಲಾಖೆಯಲ್ಲಿರುವ ಗ್ರಾಮಲೆಕ್ಕಿಗರ ಸಂಖ್ಯೆ ೯,೨೧೩

ಆ) ಕರ್ನಾಟಕ ಸಾಮಾನ್ಯ ಸೇವಾ (ಕಂದಾಯ ಅಧೀನ ಶಾಖೆ) ವೃಂದ ಮತ್ತು ನೇಮಕಾತಿ ನಿಯಮಾವಳಿ ೧೯೭೭ರ ಪ್ರಕಾರ ಗ್ರಾಮಲೆಕ್ಕಿಗರಿಗೆ ಶೇಕಡ ೪೦ರಷ್ಟು ಬಡ್ತಿ ಕೊಡುವ ಆಜ್ಞೆ ಇದೆ. ಈ ಆದೇಶದಂತೆ ೧೯೮೨ರಿಂದ ಈವರೆಗೆ ೧೬೫೫ ಗ್ರಾಮಲೆಕ್ಕಿಗರಿಗೆ ಬಡ್ತಿ ಕೊಡ